# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ಮೇ ೦೮, ೨೦೨೩ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೮ನೇ ಸಭೆಯ ನಡವಳಿಗಳು

| | |
|---|---|
| ೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಕೆ.ಸಿ. ಶಿವಾರೆಡ್ಡಿ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

| | |
|---|---|
| ೦೭. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಒಳಿತಿಗಾಗಿ ಕೈಗೊಳ್ಳುವ ಕಾರ್ಯಗಳಿಗೆ ಎಲ್ಲಾ ಸದಸ್ಯರ ಸಹಕಾರ ಕೋರಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೯.೦೩.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೭ನೇ ಸಭೆಯ ನಡವಳಿಗಳಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೯.೦೩.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೭ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೯.೦೩.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೭ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೯.೦೩.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೭ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

ಡೊಳ್ಳು ಕುಣಿತ ಸರ್ಟಿಫಿಕೇಟ್ ಕೋರ್ಸ್‌ಗೆ ಸಂಬಂಧಿಸಿದಂತೆ ಅನುಶಾಸನವನ್ನು ರಚಿಸಲು ಲಲಿತಕಲೆಗಳ ನಿಕಾಯದ ಡೀನರ ಅಧ್ಯಕ್ಷತೆಯಲ್ಲಿ ಇನ್ನುಳಿದ ಮೂರೂ ನಿಕಾಯಗಳ ಡೀನರು, ಸಮನ್ವಯಾಧಿಕಾರಿಗಳು (ಶೈಕ್ಷಣಿಕ) ಇವರುಗಳು ಸದಸ್ಯರಾಗಿ ಹಾಗೂ ನಿರ್ದೇಶಕರು ಅಧ್ಯಯನಾಂಗ ಇವರ ಸದಸ್ಯ ಸಂಚಾಲಕತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಭೆ ತೀರ್ಮಾನಿಸಿತು.

**೨೧೮.೦೧** ದಿನಾಂಕ ೦೧.೦೪.೨೦೨೩ರಂದು ನಡೆದ ವಿವಿಧ ಕೋರ್ಸ್‌ಗಳ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ನಡವಳಿಗಳ ಕುರಿತು.

**ಟಿಪ್ಪಣಿ** : ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನಾಂಗವು ನಡೆಸುತ್ತಿರುವ ವಿವಿಧ ಕೋರ್ಸ್(ಕಾರ್ಯಕ್ರಮ)ಗಳ ಶುಲ್ಕ ಪರಿಷ್ಕರಣೆ ಕುರಿತು ದಿನಾಂಕ ೦೧.೦೪.೨೦೨೩ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.



9/5/23

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ವಿವಿಧ ಕೋರ್ಸ್‌ಗಳಿಗೆ ಸಂಬಂಧಪಟ್ಟ ಶುಲ್ಕ ಪರಿಷ್ಕರಣೆಯ ಶಿಫಾರಸ್ಸುಗಳನ್ನು ಮತ್ತೊಮ್ಮೆ ಪರಿಶೀಲಿಸಿ ಅಂತಿಮಗೊಳಿಸಲು ತೀರ್ಮಾನಿಸಿತು.

೨೧೮.೦೨ ದಿನಾಂಕ ೧೧ ಮತ್ತು ೧೨ನೇ ಏಪ್ರಿಲ್ ೨೦೨೩ರಂದು ನಡೆದ ಪಿಎಚ್.ಡಿ. ನಿಯಮಾವಳಿಗಳ ಪರಿಷ್ಕರಣೆ ಸಮಿತಿ ಸಭೆಯ ನಡವಳಿಗಳ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳ ಪರಿಷ್ಕರಣೆ ಕುರಿತು ರಚಿಸಲಾದ ಸಮಿತಿಯು ದಿನಾಂಕ ೧೧ ಮತ್ತು ೧೨ನೇ ಏಪ್ರಿಲ್ ೨೦೨೩ರಂದು ಸಭೆ ಸೇರಿ ೨೦೨೨ರ ಯುಜಿಸಿ ಮಾರ್ಗಸೂಚಿ ಅನುಸಾರ ಪಿಎಚ್.ಡಿ. ನಿಯಮಾವಳಿಗಳನ್ನು ಪರಿಷ್ಕರಿಸಿ ಶಿಫಾರಸ್ಸು ಮಾಡಿದ್ದು, ಸದರಿ ಪರಿಷ್ಕೃತ ನಿಯಮಾವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಈ ಕೆಳಗಿನಂತೆ ಕ್ರಮಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

೧. ಅಧ್ಯಯನ ವಿಭಾಗಗಳ, ವಿಸ್ತರಣಾ ಕೇಂದ್ರಗಳ ಹಾಗೂ ಮಾನ್ಯತಾ ಕೇಂದ್ರಗಳ ಡಾಕ್ಟರಲ್ ಸಮಿತಿ(ಪಿಎಚ್.ಡಿ ಸಮಿತಿ)ಗಳನ್ನು ಪ್ರಸ್ತುತ ಜಾರಿಯಲ್ಲಿರುವಂತೆಯೇ ಮುಂದುವರೆಸುವುದು.

೨. ೨೦೨೨ರ ಯುಜಿಸಿ ಮಾರ್ಗಸೂಚಿಯಂತೆ ಸಮಿತಿಯು ಸಿದ್ಧಪಡಿಸಿದ ಪಿಎಚ್.ಡಿ. ಕರಡು ನಿಯಮಾವಳಿಗಳನ್ನು ಸಭೆಯು ಅನುಮೋದಿಸಿತು.

೩. ಪಿಎಚ್.ಡಿ. ನಿಯಮಾವಳಿಯ ಇಂಗ್ಲೀಷ್ ಮತ್ತು ಕನ್ನಡ ಕರಡು ಪ್ರತಿಗಳನ್ನು ಬಾಹ್ಯ ತಜ್ಞರೊಬ್ಬರಿಂದ ಪರಿಶೀಲಿಸಿ ಅಂತಿಮಗೊಳಿಸುವುದು.

೨೧೮.೦೩ ಮಾನ್ಯ ಕುಲಪತಿಗಳು ಅಧ್ಯಯನ ವಿಭಾಗಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಶೈಕ್ಷಣಿಕ ಚಟುವಟಿಕೆಗಳ ವರದಿ ಕುರಿತು.

ಟಿಪ್ಪಣಿ : ದಿನಾಂಕ ೧೭.೦೪.೨೦೨೩ ರಿಂದ ೨೦.೦೪.೨೦೨೩ರ ವರೆಗೆ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಶೈಕ್ಷಣಿಕ ಚಟುವಟಿಕೆಗಳ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಶೈಕ್ಷಣಿಕ ಚಟುವಟಿಕೆಗಳ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. ಹಾಗೂ ಪ್ರಸ್ತುತ ಲಭ್ಯವಿರುವ ಅನುದಾನದಲ್ಲಿ ಅಧ್ಯಯನ ವಿಭಾಗಗಳ ಯೋಜನೆಗಳಿಗೆ ಅನುದಾನ ಹಂಚಿಕೆ ಸಂಬಂಧಿತ ಕ್ರಿಯಾ ಯೋಜನೆಯನ್ನು ರೂಪಿಸಿ, ಈ ಕುರಿತು ಡೀನ್ ಸಮಿತಿಯಲ್ಲಿ ಚರ್ಚಿಸಿ ಸೂಕ್ತ ಕ್ರಮವಹಿಸಲು ಸಭೆಯು ತೀರ್ಮಾನಿಸಿತು.

೨೧೮.೦೪ ಶ್ರೀಮತಿ ಚಿತ್ರಕಲಾ ಹೆಚ್.ಡಿ., ಕಿರಿಯ ಸಹಾಯಕರು, ಇವರ ವೇತನ ರಹಿತ ಅನಧಿಕೃತ ಗೈರುಹಾಜರಿ ಆದೇಶ ರದ್ದುಪಡಿಸಿ ಖಾತೆಯಲ್ಲಿರುವ ರಜೆಗಳನ್ನು ಮಂಜೂರು ಮಾಡಿ ವೇತನ ನೀಡುವ ಕುರಿತು.

ಟಿಪ್ಪಣಿ : ಶ್ರೀಮತಿ ಚಿತ್ರಕಲಾ ಹೆಚ್.ಡಿ., ಕಿರಿಯ ಸಹಾಯಕರು, ಇವರು ದಿನಾಂಕ ೨೫.೦೬.೨೦೨೨ರಿಂದ ೧೮.೧೨.೨೦೨೨ರವರೆಗೆ ಅನಾರೋಗ್ಯ ನಿಮಿತ್ತ ಕಚೇರಿಗೆ ಅನಧಿಕೃತ ಗೈರು ಹಾಜರಾಗಿರುವುದರಿಂದ ದಿನಾಂಕ ೨೦.೦೭.೨೦೨೨ ಮತ್ತು ೨೨.೦೮.೨೦೨೨ರಂದು ವೇತನ ತಡೆಹಿಡಿಯಲು ಆದೇಶವನ್ನು ಹೊರಡಿಸಲಾಗಿತ್ತು.

ದಿನಾಂಕ ೨೧.೧೨.೨೦೨೨ರ ಕಚೇರಿ ಆದೇಶದ ಮೂಲಕ ಸದರಿಯವರನ್ನು ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿನ ಮೇರೆಗೆ ದಿನಾಂಕ ೧೯.೧೨.೨೦೨೨ರಿಂದ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಈ ಆದೇಶದನ್ವಯ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸದರಿಯವರು ಸಲ್ಲಿಸಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ಗೈರು ಹಾಜರಿ ಅವಧಿಯ (ದಿನಾಂಕ ೨೫.೦೬.೨೦೨೨ರಿಂದ ೧೮.೧೨.೨೦೨೨ರವರೆಗೆ) ಒಟ್ಟು ೧೭೭ ದಿನಗಳನ್ನು ಸಿಬ್ಬಂದಿ ಖಾತೆಯಲ್ಲಿರುವ ರಜೆಗಳಿಗೆ ಸರಿದೂಗಿಸಿ, ಮಂಜೂರು ಮಾಡಲು ಹಾಗೂ ವೇತನ ಪಾವತಿಗೆ ಕೋರಿ ದಿನಾಂಕ ೧೮.೦೩.೨೦೨೩ರಂದು ಮನವಿ ಸಲ್ಲಿಸಿರುತ್ತಾರೆ.

ಸದರಿಯವರ ಗೈರುಹಾಜರಿಯ ೧೭೭ ದಿನಗಳಲ್ಲಿ ಅವರ ಖಾತೆಯಲ್ಲಿ ದಿನಾಂಕ ೨೪.೦೬.೨೦೨೨ರ ಅಂತ್ಯಕ್ಕೆ ಇರುವ ೧೦೭ ಗಳಿಕೆ ರಜೆಗಳನ್ನು ಕೆಸಿಎಸ್‌ಆರ್ ನಿಯಮ ೧೦೬ ಎ ರಲ್ಲಿ ಉಪಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ಷರತ್ತುಬದ್ಧವಾಗಿ ರಜೆ ಮಂಜೂರು ಮಾಡಲು ಅವಕಾಶವಿದೆ. ಹೀಗೆ ರಜೆ ಮಂಜೂರಾತಿಯಂತೆ ವೇತನ ಪಾವತಿಸಲು ಮತ್ತು ಉಳಿದ ೭೦ ದಿನಗಳನ್ನು ಗೈರುಹಾಜರಿ ಹಾಗೂ ವೇತನ ರಹಿತ ರಜೆಯೆಂದು ಪರಿಗಣಿಸಿ, ಇದರಿಂದ ಉಂಟಾಗುವ ಸೇವಾ ಹಿನ್ನಡೆ ಮತ್ತಿತರ ಪರಿಣಾಮಗಳಿಗೆ ಸಿಬ್ಬಂದಿಯನ್ನು ಹೊಣೆಯಾಗಿಸಿ ಆದೇಶ ಹೊರಡಿಸಲು ಕಾರ್ಯಕಾರಿ ಸಮಿತಿ ಅನುಮೋದನೆಗೆ ಮಂಡಿಸಿದೆ.

ನಿರ್ಣಯ : ಪ್ರಸ್ತುತ ವಿಷಯದ ಕುರಿತು ಚರ್ಚಿಸಿದ ಸಭೆಯು ಸದರಿಯವರಿಗೆ ವೇತನ ರಹಿತ ರಜೆ ಮಂಜೂರು ಮಾಡಲು ಹಾಗೂ ಕೆಸಿಎಸ್‌ಆರ್ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ತೀರ್ಮಾನಿಸಿತು.

೨೧೮.೦೫ ಡಾ. ವಾಸುದೇವ ಬಡಿಗೇರ, ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರು ದಿನಾಂಕ ೨೧.೧೨.೨೦೨೨ರಿಂದ ೦೩.೦೧.೨೦೨೩ರವರೆಗೆ ತಡೆಹಿಡಿದ ವೇತನ ಪಾವತಿಸುವ ಕುರಿತು.

ಟಿಪ್ಪಣಿ : ಡಾ. ವಾಸುದೇವ ಬಡಿಗೇರ, ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರನ್ನು ದಿನಾಂಕ ೨೧.೧೨.೨೦೨೨ರ ಕಚೇರಿ ಆದೇಶದ ಮೂಲಕ ದೇವದುರ್ಗ ವಿಸ್ತರಣಾ ಕೇಂದ್ರಕ್ಕೆ ನಿರ್ದೇಶಕರನ್ನಾಗಿ ನಿಯೋಜಿಸಲಾಗಿತ್ತು. ಈ ಆದೇಶವನ್ನು ಪಾಲಿಸದೆ ಇರುವುದರಿಂದ ಆದೇಶ ಪಾಲಿಸುವತನಕದ ಅವಧಿಯನ್ನು ಗೈರು ಹಾಜರಿಯೆಂದು ಪರಿಗಣಿಸುವಂತೆ ದಿನಾಂಕ ೦೩.೦೧.೨೦೨೩ರ ಕಚೇರಿ ಆದೇಶದಲ್ಲಿ ಆದೇಶಿಸಲಾಗಿದೆ. ದಿನಾಂಕ ೦೪.೦೧.೨೦೨೩ರಂದು ನಿಯೋಜಿತ ನಿರ್ದೇಶಕರಾಗಿ ವಿದ್ಯಾರಣ್ಯದಲ್ಲಿ ವರದಿ ಮಾಡಿಕೊಂಡು ದಿನಾಂಕ ೦೫.೦೧.೨೦೨೩ರಂದು ವಿಸ್ತರಣಾ ಕೇಂದ್ರದಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮುಂದುವರಿದು ಸದರಿಯವರ ಮನವಿಯ ಮೇರೆಗೆ ಇವರನ್ನು ನಿಯೋಜಿತ ವಿಸ್ತರಣಾ ಕೇಂದ್ರದಿಂದ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ದಿನಾಂಕ ೨೩.೦೨.೨೦೨೩ರಂದು ವರ್ಗಾಯಿಸಿ ಆದೇಶಿಸಿದೆ. ಡಿಸೆಂಬರ್ ೨೦೨೨ ಮತ್ತು ಜನವರಿ ೨೦೨೩ರ (೨೧.೧೨.೨೦೨೨ರಿಂದ ೦೩.೦೧.೨೦೨೩ರವರೆಗೆ) ತಿಂಗಳಲ್ಲಿ ಕಡಿತಗೊಳಿಸಿರುವ ವೇತನವನ್ನು ಪಾವತಿಸಲು ದಿನಾಂಕ ೧೬.೦೩.೨೦೨೩ರಂದು ಸಲ್ಲಿಸಿದ ಮನವಿಯ ಮೇರೆಗೆ ದಿನಾಂಕ ೦೩.೦೧.೨೦೨೩ರಂದು ಹೊರಡಿಸಿದ ಆದೇಶವನ್ನು ಹಿಂಪಡೆಯಲು ಹಾಗೂ ಮುಂದಿನ ಲೆಕ್ಕಪರಿಶೋಧನೆಯಲ್ಲಿ ಉಂಟಾಗಬಹುದಾದ ಆಕ್ಷೇಪಣೆಗಳಿಗೆ ಬದ್ಧರಾಗಿರುವ ಷರತ್ತಿಗೊಳ್ಳಪಟ್ಟು ವೇತನ ಪಾವತಿಸಲು ಮಾನ್ಯ ಕುಲಪತಿಗಳು ಆದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆಗೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಚರ್ಚಿಸಿ ಲೆಕ್ಕಪರಿಶೋಧನೆಯಲ್ಲಿ ಉಂಟಾಗಬಹುದಾದ ಆಕ್ಷೇಪಣೆಗಳಿಗೆ ಬದ್ಧರಾಗಿರುವ ಷರತ್ತಿಗೊಳ್ಳಪಟ್ಟು ವೇತನ ಪಾವತಿಸಲು ಅನುಮೋದನೆ ನೀಡಿತು.

೨೧೮.೦೬ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾಪೂರ್ವ ಅವಧಿಯ ಆದೇಶವನ್ನು ಪರಿಷ್ಕರಿಸಿ ಸೇವಾ ಸೌಲಭ್ಯ ಮತ್ತು ಆರ್ಥಿಕ ಸೌಲಭ್ಯ ವಿಸ್ತರಿಸುವ ಕುರಿತು.

ಟಿಪ್ಪಣಿ : **ಬೋಧಕ ಸಿಬ್ಬಂದಿಗಳು :**

೧. ಡಾ. ಎಸ್.ಎ. ಗೋವರ್ಧನ, ಸಹಾಯಕ ಪ್ರಾಧ್ಯಾಪಕರು
೨. ಡಾ. ಕೆ. ಗೀತಮ್ಮ, ಸಹಾಯಕ ಪ್ರಾಧ್ಯಾಪಕರು
೩. ಡಾ. ಗೋವಿಂದ, ಸಹಾಯಕ ಪ್ರಾಧ್ಯಾಪಕರು
೪. ಡಾ. ಮೋಹನರಾವ್ ಬಿ. ಪಂಚಾಳ, ಸಹಾಯಕ ಪ್ರಾಧ್ಯಾಪಕರು.

**ಬೋಧಕೇತರ ಸಿಬ್ಬಂದಿಗಳು :**

೧. ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು
೨. ಶ್ರೀ ಹರ್ಷವರ್ಧನ, ಗ್ರಂಥಾಲಯ ಸಹಾಯಕರು
೩. ಕು. ಮೇಘಾ, ಗ್ರಂಥಾಲಯ ಸಹಾಯಕರು
೪. ಶ್ರೀ ಬೀರಪ್ಪ, ಸಹಾಯಕ ತೋಟಗಾರಿಕಾಧಿಕಾರಿ
೫. ಶ್ರೀ ರಾಘವೇಂದ್ರ, ಶೀಘ್ರಲಿಪಿಗಾರರು.

ಮೇಲ್ಕಂಡ ಸಿಬ್ಬಂದಿಗಳ ಸೇವಾಪೂರ್ವ ಅವಧಿ ತೃಪ್ತಿಕರವಾಗಿದೆಯೆಂದು ಘೋಷಿಸಿ ಆರ್ಥಿಕ ಸೌಲಭ್ಯವಿಲ್ಲದೆ ಸೇವಾ ಸೌಲಭ್ಯ ಮಾತ್ರ ವಿಸ್ತರಿಸಿ ಷರತ್ತಿನೊಂದಿಗೆ ದಿನಾಂಕ ೦೬.೦೮.೨೦೨೨ರಂದು ಆದೇಶ ಹೊರಡಿಸಲಾಗಿತ್ತು. ಈ ಆದೇಶವನ್ನು ಪರಿಷ್ಕರಿಸಿ ಸೇವಾ ಸೌಲಭ್ಯದೊಂದಿಗೆ ಆರ್ಥಿಕ ಸೌಲಭ್ಯಗಳನ್ನು ನೀಡುವಂತೆ ಕೋರಿ ದಿನಾಂಕ ೨೮.೦೨.೨೦೨೩ ಹಾಗೂ ೨೭.೦೩.೨೦೨೩ರ ಪತ್ರದ ಮೂಲಕ ಸಿಬ್ಬಂದಿಗಳು ಮನವಿಯನ್ನು ಸಲ್ಲಿಸಿರುತ್ತಾರೆ.

**ಈಗಾಗಲೇ ನಾಲ್ಕು ಜನ ಅಧ್ಯಾಪಕರುಗಳಾದ**

೧. ಡಾ. ವೆಂಕಟಗಿರಿ ದಳವಾಯಿ, ಸಹ ಪ್ರಾಧ್ಯಾಪಕರು
೨. ಡಾ. ಅಮರೇಶ ಯತಗಲ್, ಸಹ ಪ್ರಾಧ್ಯಾಪಕರು
೩. ಡಾ. ಶಾಂತಪ್ಪ, ಸಹಾಯಕ ಪ್ರಾಧ್ಯಾಪಕರು
೪. ಡಾ. ಈ. ಯರ್ರಿಸ್ವಾಮಿ, ಸಹಾಯಕ ಪ್ರಾಧ್ಯಪಕರು

ಇವರುಗಳಿಗೆ ದಿನಾಂಕ ೧೯.೦೩.೨೦೨೩ ರಂದು ಸೇವಾಪೂರ್ವ ಅವಧಿ ಘೋಷಿಸಿ ಸೇವಾ ಮತ್ತು ಆರ್ಥಿಕ ಸೌಲಭ್ಯಗಳನ್ನು ವಿಸ್ತರಿಸಿ ಆದೇಶ ಹೊರಡಿಸಿದ ನಿದರ್ಶನಗಳ ಹಿನ್ನೆಲೆಯಲ್ಲಿ ಸದರಿ ಸಿಬ್ಬಂದಿಗಳಿಗೆ ಆರ್ಥಿಕ ಸೌಲಭ್ಯದೊಂದಿಗೆ ಸೇವಾಪೂರ್ವ



9/5/23

ಅವಧಿ ತೃಪ್ತಿಕರವಾಗಿದೆ ಎಂದು ಘೋಷಿಸಿ ಪರಿಷ್ಕೃತ ಆದೇಶ ಹೊರಡಿಸಲು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಗೆ ಕೋರಿದೆ.

**ನಿರ್ಣಯ :** ಪ್ರಸ್ತುತ ವಿಷಯದ ಕುರಿತು ಸಭೆಯು ಚರ್ಚಿಸಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾಪೂರ್ವ ಅವಧಿಯ ಆದೇಶವನ್ನು ಪರಿಷ್ಕರಿಸಿ ಸೇವಾ ಸೌಲಭ್ಯ ಮತ್ತು ಆರ್ಥಿಕ ಸೌಲಭ್ಯ ವಿಸ್ತರಿಸಿ, ವೇತನ ನಿಗದೀಕರಣ ಮಾಡಿ, ಹೆಚ್‌ಆರ್‌ಎಂಎಸ್ ಮೂಲಕ ಬಾಕಿ ವೇತನ ಪಾವತಿಗೆ ಕ್ರಮವಹಿಸಲು ಸಭೆ ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**೨೧೮.೦೭** ಹಸ್ತಪ್ರತಿಶಾಸ್ತ್ರ ವಿಭಾಗದ ಹಳೆಯ/ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ ಬಳಕೆ ಕುರಿತು.

**ಟಿಪ್ಪಣಿ :** ಹಸ್ತಪ್ರತಿಶಾಸ್ತ್ರ ವಿಭಾಗದ ಹಳೆಯ/ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ ಠೇವಣಿ ಮೊತ್ತವು ರೂ. ೩,೩೯,೬೧೧/– (ಮೂರು ಲಕ್ಷದ ಮೂವತ್ತೊಂಭತ್ತು ಸಾವಿರದ ಆರುನೂರ ಹನ್ನೊಂದು ರೂಪಾಯಿಗಳು)ಗಳನ್ನು ನಿಶ್ಚಿತ ಠೇವಣಿಯಾಗಿ ತೊಡಗಿಸಿ ಅದರಿಂದ ಬರುವ ಬಡ್ಡಿ ಹಣದ ಬಳಕೆಗೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಹಸ್ತಪ್ರತಿಶಾಸ್ತ್ರ ವಿಭಾಗದ ಹಳೆಯ/ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ ಕುರಿತು ಸಭೆ ಚರ್ಚಿಸಿ ಮೂಲ ಹಣವನ್ನು ನಿಶ್ಚಿತ ಠೇವಣಿಯನ್ನಾಗಿರಿಸಿ ಬರುವ ಬಡ್ಡಿಯಿಂದ ಪ್ರಶಸ್ತಿ ಪುರಸ್ಕೃತ ಹಳೆಯ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಮತ್ತು ಹಳೆಯ ವಿದ್ಯಾರ್ಥಿಗಳ ಸಮಾವೇಶಗಳನ್ನು ಆಯೋಜಿಸಲು ತೀರ್ಮಾನಿಸಿತು.

**೨೧೮.೦೮** ಕನ್ನಡ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ನೇಮಕಾತಿ/ಪದೋನ್ನತಿಗೆ ನಿರ್ಬಂಧಿಸುವ ಅನುಶಾಸನದ ಕರಡು ಪರಿನಿಯಮಗಳ ಸೇರ್ಪಡೆ ಮತ್ತು ಕೈಬಿಡುವ (ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ: ಇ–ಕಛೇರಿ ಸಂಖ್ಯೆ: ಇಡಿ/೩೮/ಕೆವಿವಿ/೨೦೨೨ ದಿನಾಂಕ ೧೧.೦೪.೨೦೨೩ರ ಪತ್ರ) ಕುರಿತು.

**ಟಿಪ್ಪಣಿ :** ವಿಶ್ವವಿದ್ಯಾಲಯ/ಕಾಲೇಜುಗಳಲ್ಲಿ ಬೋಧಕ/ಇತರೆ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿ ಕ್ರಮ ವಿಧಾನಗಳು, ನೇಮಕಾತಿಗಾಗಿ ಅವಶ್ಯವಾಗುವ ಕನಿಷ್ಠ ವಿದ್ಯಾರ್ಹತೆ, ಸೇವಾ ಷರತ್ತುಗಳು ಹಾಗೂ ಉನ್ನತ ಶಿಕ್ಷಣದ ಗುಣಮಟ್ಟ ನಿರ್ವಹಣೆ/ಸಂರಕ್ಷಣೆಗೆ ಅಗತ್ಯವಾದ ಕ್ರಮಗಳು/ಮಾರ್ಗೋಪಾಯಗಳ ಸಂಬಂಧವಾಗಿ ವಿಶ್ವವಿದ್ಯಾಲಯದ ಧನಸಹಾಯ(ಯುಜಿಸಿ)ವು ದಿನಾಂಕ ೧೮.೦೭.೨೦೧೮ರ ಅಧಿಸೂಚನೆಯನ್ವಯ ಜಾರಿಗೊಳಿಸಲಾದ ೨೦೧೮ರ ವಿನಿಯಮಗಳನ್ನು ಅಳವಡಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಸದರಿ ಪತ್ರದಲ್ಲಿನ ಪ್ರಸ್ತಾವನೆ ಕರಡು ಪರಿನಿಯಮಕ್ಕೆ ಸಂಬಂಧಪಟ್ಟಂತೆ ನೀಡಲಾಗಿರುವ ನಿರ್ದೇಶನುಸಾರ ಎರಡು ಅಂಶಗಳನ್ನು ಅಂದರೆ, ಕೈಬಿಡುವ ಮತ್ತು ಸೇರ್ಪಡೆ ಮಾಡುವ ಮೂಲಕ ವಿಶ್ವವಿದ್ಯಾಲಯದ ಅಗತ್ಯ ಪ್ರಾಧಿಕಾರವಾದ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದು ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ.

ಈಗ ಕೈಬಿಡುವ ಮತ್ತು ಸೇರ್ಪಡೆ ಮಾಡುವ ಅಂಶಗಳ ಕರಡು ಪ್ರಸ್ತಾವನೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಕನ್ನಡ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ನೇಮಕಾತಿ/ಪದೋನ್ನತಿಗಳನ್ನು ನಿರ್ಬಂಧಿಸುವ ಅನುಶಾಸನ ಕರಡು ಪರಿನಿಯಮಗಳಿಗೆ ಸರ್ಕಾರದ ನಿರ್ದೇಶನದಂತೆ ಅಗತ್ಯ ತಿದ್ದುಪಡಿಗಳನ್ನು ಮಾಡಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು.

**೨೧೮.೦೯** ದಿನಾಂಕ ೧೯.೦೧.೨೦೨೩ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ತರಗತಿಗಳ (ಚಿತ್ರಕಲೆ/ಶಿಲ್ಪಕಲೆ/ಅನ್ವಯಿಕಕಲೆ) ಅಧ್ಯಯನ ಮಂಡಳಿ ಸಭೆ ನಡೆವಳಿ ಕುರಿತು.

**ಟಿಪ್ಪಣಿ :** ದಿನಾಂಕ ೧೯.೦೧.೨೦೨೩ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಚಿತ್ರಕಲಾ ವಿದ್ಯಾಲಯಗಳ ಬಿ.ವಿ.ಎ. ಪದವಿ ತರಗತಿಗಳ (ಚಿತ್ರಕಲೆ/ಶಿಲ್ಪಕಲೆ/ಅನ್ವಯಿಕಕಲೆ) ಅಧ್ಯಯನ ಮಂಡಳಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು.

**೨೧೮.೧೦** ದಿನಾಂಕ ೨೧.೦೪.೨೦೨೩ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ಮತ್ತು ಡಿಪ್ಲೊಮಾ ತರಗತಿಗಳ (ಚಿತ್ರಕಲೆ/ಶಿಲ್ಪಕಲೆ/ಅನ್ವಯಿಕಕಲೆ) ಅಧ್ಯಯನ ಮಂಡಳಿ ಸಭೆ ನಡೆವಳಿ ಕುರಿತು.

**ಟಿಪ್ಪಣಿ :** ದಿನಾಂಕ ೨೧.೦೪.೨೦೨೩ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಚಿತ್ರಕಲಾ ವಿದ್ಯಾಲಯಗಳ ಬಿ.ವಿ.ಎ. ಪದವಿ ಮತ್ತು ಡಿಪ್ಲೊಮಾ ತರಗತಿಗಳ (ಚಿತ್ರಕಲೆ/ಶಿಲ್ಪಕಲೆ/ಅನ್ವಯಿಕಕಲೆ) ಅಧ್ಯಯನ ಮಂಡಳಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು.

೨೧೮.೧೧ ೨೦೨೧-೨೨ನೇ ಸಾಲಿನ Annual Quality Assurance Report (AQAR) ಅನ್ನು ನ್ಯಾಕ್‌ಗೆ ಅಪ್‌ಲೋಡ್ ಮಾಡುವ ಕುರಿತು.

ಟಿಪ್ಪಣಿ : ದಿನಾಂಕ ೦೩.೦೫.೨೦೨೩ರಂದು ನಡೆದ ಐಕ್ಯುಎಸಿ ಪದಾಧಿಕಾರಿ ಮಂಡಳಿ ಸಭೆ(೧)ಯ ನಡೆವಳಿಗಳ ನಿರ್ಣಯ ಸಂಖ್ಯೆ ೦೨ ರಂತೆ ಕನ್ನಡ ವಿಶ್ವವಿದ್ಯಾಲಯದ ೨೦೨೧-೨೨ನೇ ಸಾಲಿನ Annual Quality Assurance Report (AQAR) (ವರದಿ)ನ್ನು ನ್ಯಾಕ್‌ಗೆ ಅಪ್‌ಲೋಡ್ ಮಾಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಪ್ರಸ್ತುತ ವಿಷಯವನ್ನು ಸಭೆಯು ಪರಿಶೀಲಿಸಿ ಕನ್ನಡ ವಿಶ್ವವಿದ್ಯಾಲಯದ ೨೦೨೧-೨೨ನೇ ಸಾಲಿನ Annual Quality Assurance Report (AQAR)ನ್ನು ನ್ಯಾಕ್‌ಗೆ ಅಪ್‌ಲೋಡ್ ಮಾಡಲು ಅನುಮೋದನೆ ನೀಡಿತು.

೨೧೮.೧೨ ದಿನಾಂಕ ೦೮.೦೫.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೦೮.೦೫.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೦೮.೦೫.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೮.೧೩ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ಪದೋನ್ನತಿ ಸಂಬಂಧ ಸೇವಾ ಜೇಷ್ಠತೆ ಪಟ್ಟಿಯನ್ನು ಸಿದ್ಧಪಡಿಸುವ ಕುರಿತು.

ನಿರ್ಣಯ : ಪ್ರಸ್ತುತ ವಿಷಯದ ಕುರಿತು ಸಭೆಯು ಚರ್ಚಿಸಿ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ಪದೋನ್ನತಿ ಸಂಬಂಧ ಹಣಕಾಸು ಅಧಿಕಾರಿಗಳು ಮತ್ತು ಉಪಕುಲಸಚಿವರು (ಆ) ಇವರುಗಳು ಬೋಧಕೇತರ ಸಿಬ್ಬಂದಿಗಳ ೧೯೯೨ರಿಂದ ಮೊದಲ್ಗೊಂಡು ಸೇವಾ ಜೇಷ್ಠತೆ ಪಟ್ಟಿಯನ್ನು ಸಿದ್ಧಪಡಿಸಬೇಕೆಂದು ತೀರ್ಮಾನಿಸಿತು.

೨೧೮.೧೪ ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೫-೧೬ ಮತ್ತು ೨೦೧೬-೧೭ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗೆಗೆ ಸರ್ಕಾರದಿಂದ ಬಂದಿರುವ ಪತ್ರಗಳ ಪ್ರಕಾರ ಪ್ರಕರಣ ದಾಖಲಿಸುವ ಕುರಿತು.

ನಿರ್ಣಯ : ಪ್ರಸ್ತುತ ವಿಷಯದ ಕುರಿತು ಚರ್ಚಿಸಿದ ಸಭೆಯು ಸರ್ಕಾರಿ ವಕೀಲ(ಪ್ಲೀಡರ್)ರೊಬ್ಬರಿಂದ ಕಾನೂನು ಸಲಹೆಯನ್ನು ಪಡೆದು ಮುಂದಿನ ಕ್ರಮವಹಿಸಲು ತೀರ್ಮಾನಿಸಿತು.

೨೧೮.೧೫ ವಿಶ್ವವಿದ್ಯಾಲಯದ ಅಧ್ಯಾಪಕರು ಸ್ವ ಮೌಲ್ಯಮಾಪನ ವರದಿಯನ್ನು ಸಲ್ಲಿಸುವ ಕುರಿತು.

ನಿರ್ಣಯ : ಪ್ರಸ್ತುತ ವಿಷಯದ ಕುರಿತು ಸಭೆಯು ಚರ್ಚಿಸಿ ವೇತನ ಪಾವತಿ ಸಂಬಂಧ ಕಡ್ಡಾಯವಾಗಿ ಪ್ರತಿ ತಿಂಗಳ ೨೦ನೇ ತಾರೀಕಿನ ಒಳಗಾಗಿ ಎಲ್ಲಾ ವಿಭಾಗಗಳು ಸಿಬ್ಬಂದಿಗಳ ಹಾಜರಾತಿಯನ್ನು ವೇತನ ಶಾಖೆಗೆ ಸಲ್ಲಿಸುವುದು ಹಾಗೂ ಯುಜಿಸಿ ನಿಯಮಾನುಸಾರ ವರ್ಷಕ್ಕೊಂದು ಬಾರಿ ಸ್ವ ಮೌಲ್ಯಮಾಪನ ವರದಿಯನ್ನು ಎಲ್ಲಾ ಅಧ್ಯಾಪಕರು ಕಡ್ಡಾಯವಾಗಿ ಆಡಳಿತಾಂಗಕ್ಕೆ ಸಲ್ಲಿಸಲು ತೀರ್ಮಾನಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

9/5/23
ಕುಲಪತಿಗಳು
ಅಧ್ಯಕ್ಷರು